

## ಮಕರ ತೋರಣ

ಹಬ್ಬ ಹರಿದಿನಗಳಲ್ಲಿ ಮನೆಯ ಮುಂಬಾಗಿಲಿಗೆ ಮಾವಿನ ಎಲೆ ಹೂವುಗಳಿಂದ ಅಲಂಕೃತ ತಳಿರು ತೋರಣ ಕಟ್ಟುವುದು ನಮ್ಮೆಲ್ಲರ ಸಂಪ್ರದಾಯ. ಇಲ್ಲೊಂದು ದೇಗುಲದ ಬಾಗಿಲಿಗೆ ಶಿಲ್ಪಕೌಶಲದಿಂದ ತಳಿರು ತೋರಣದ ಸ್ಪರ್ಶ ನೀಡಿರುವುದು ವಿಶೇಷವೆನಿಸಿದೆ. ವಿಜಯನಗರ ಜಿಲ್ಲೆಗೆ ಸೇರ್ಪಡೆಯಾಗಿರುವ ಹರಪನಹಳ್ಳಿಯ ಬಾಗಳಿ ಗ್ರಾಮದ ಕಲ್ಲೇಶ್ವರ ದೇವಾಲಯದಲ್ಲಿ ಈ ತಳಿರು ತೋರಣದ ಶಿಲ್ಪಕೌಶಲವನ್ನು ಕಾಣಬಹುದು. ದೇಗುಲದ ಅರ್ಚಕ ಬಸವರಾಜ ಅವರು 'ಮಕರ ತೋರಣ'ದಿಂದ ಅಂತರಾಳದ ದ್ವಾರವನ್ನು ಅಲಂಕರಿಸಿರುವುದರ ಬಗೆಗೆ ವಿವರಿಸಿದಾಗ ಆಶ್ಚರ್ಯವಾಯ್ತು.

ಹೆಣ್ಣಿನ ಸೌಂದರ್ಯವನ್ನು ಕವಿಗಳು ವರ್ಣಿಸಿದಂತೆ ಶಿಲ್ಪಿ ತನ್ನಲ್ಲಿರುವ ಶಿಲ್ಪಕಲಾಕೌಶಲ್ಯವನ್ನು ಈ ಮಕರ ತೋರಣದಲ್ಲಿ ಬಿಂಬಿಸಿರುವುದು ವಿಶೇಷ. ತೋರಣದ ಎರಡೂ ಬದಿಯಲ್ಲಿ ಮಕರ ಮುಖದ ಆಕೃತಿ ಇದ್ದರೆ, ಚಾವಣಿಯ ಎಡಭಾಗದಲ್ಲಿ ನವಿಲಿನ ಪುಚ್ಛ, ಕೆಳಗಡೆ ಮೊಸಳೆಯ ದೇಹ, ಅದರ ಕೆಳಭಾಗದಲ್ಲಿ ಸಿಂಹದ ಕಾಲು, ಹಾಗೆಯೇ ಮೇಲೆ ಆನೆಯ ಸೊಂಡಿಲು, ಆನೆಯ ಕಿವಿ, ಮೀನಿನ ಕಣ್ಣು ವಿಶಿಷ್ಟ ಪ್ರಾಣಿಯ ಕಲ್ಪನೆ ಕಾಣಬಹುದು. 64 ಭಂಗಿಗಳ ಶಿವ ಇಲ್ಲಿ ರಾಕ್ಷಸ ವಧ, ಗಜವಧ ಹಾಗೂ ನಾಟ್ಯ ಭಂಗಿಯ ರೂಪ ತಾಳಿದ್ದಾನೆ. ಮಧ್ಯದಲ್ಲಿರುವ ಶಿವನು ಗಜಚರ್ಮಾಂಬರಧರನಾಗಿ (ಆನೆಯ ಚರ್ಮ ಧರಿಸಿ) ಆನೆಯ ಶಿರದ ಮೇಲೆ ನೃತ್ಯ ಭಂಗಿಯಲ್ಲಿ 180 ಡಿಗ್ರಿಯಲ್ಲಿ ಸೊಂಟ ತಿರುಗಿಸಿದ ನೃತ್ಯದ ವಿಶಿಷ್ಟ ಕೆತ್ತನೆ ಕಾಣಬಹುದು.

—ರಘುನಾಥರಾವ್ ತಾಪ್ಸೆ, ದಾವಣಗೆರೆ

## ನಾಟಿ ತಾಕತ್ತು

ಕಲ್ಲಂಗಡಿ ಎತ್ತಲು ಚಿಣ್ಣರಿಬ್ಬರು ಪ್ರಯಾಸ ಪಡುತ್ತಿರುವ ಚಿತ್ರವಿದು. ನಾಲ್ಕೂ ಕೈ ಜೋಡಿಯಾದರೂ ಕಲ್ಲಂಗಡಿಯನ್ನು ಎತ್ತಲು ಅವರಿಗೆ ಕಷ್ಟವಾಗುತ್ತಿರುವುದು ಚಿತ್ರದಿಂದ ಸ್ಪಷ್ಟವಾಗುತ್ತದೆ. ಅಂದರೆ ಇದು ಅಂತಿಂಥ ಕಲ್ಲಂಗಡಿ ಅಲ್ಲವೇ ಅಲ್ಲ. ಎಂಟರಿಂದ ಹತ್ತು ಕೆ.ಜಿ. ತೂಕದ ಇದು ವ್ಯವಸ್ಥಿತವಾಗಿ ಬೇಸಾಯ ಮಾಡಿ, ಜತನ ಮಾಡಿ ಬೆಳೆದ ಫಲವಂತೂ ಅಲ್ಲ. ಕಲ್ಲಂಗಡಿ ತಿಂದು ಅದರ ಬೀಜವನ್ನು ಉಗಿಯುವುದು ಸಾಮಾನ್ಯ. ಹಾಗೇ ಉಗಿದ ಬೀಜವೊಂದು ಕಸದ ಬುಟ್ಟಿ ಸೇರಿ, ಅಲ್ಲಿಂದ ತಿಪ್ಪೆಗೆ ಸಾಗಿ ಗೊಬ್ಬರದಲ್ಲಿ ಬೆರೆತು ಆ ಗೊಬ್ಬರವು ಹೊಲಕ್ಕೆ ಪ್ರಸಾರವಾಗಿ ತಂತಾನೇ ಬೆಳೆದು ನೀಡಿದ ಫಸಲು ಇದಾಗಿದೆ.

ಈ ಇಡೀ ಪ್ರಕ್ರಿಯೆಯೇ ಒಂದು ರೀತಿಯಲ್ಲಿ ನಾಟಿ ಪ್ರಕ್ರಿಯೆ ಇದ್ದಂತೆ. ನಾಟಿ ತಾಕತ್ತೇ ಹಾಗೆ. ಸಂಕರಣ ತಳಿ, ಬಿಟಿ ತಳಿ, ಕುಲಾಂತರಿ, ತಳಿಗಳ ಬೆನ್ನು ಬಿದ್ದು ಹೊರಟಿರುವ ಜಮಾನಕ್ಕೆ ನಾವೇನು ಕಮ್ಮಿ ಅನ್ನುವ ಕಥೆಯನ್ನು ಈ ಕಲ್ಲಂಗಡಿ ಹೇಳುವಂತಿದೆ. ಅಂದಹಾಗೆ ಕಲ್ಲಂಗಡಿ ಕಂಡುಬಂದಿದ್ದು ರಾಣೆಬೆನ್ನೂರು ಹತ್ತಿರದ ಕೆರಿಮಲ್ಲಾಪುರ ಗ್ರಾಮದ ವೀರನಗೌಡ್ರ ಹೊಲದಲ್ಲಿ. ಒಂದೇ ಒಂದು ಬಳ್ಳಿಯಿಂದ ಹತ್ತಿಪ್ಪತ್ತು ಹಣ್ಣುಗಳು ಬಂದಿವೆಯಂತೆ!

—ಆರ್.ಎಸ್. ಪಾಟೀಲ್, ಹೊಸರಿತ್ತಿ





## ಕಣ್ಮನ ಸೆಳೆಯುವ ಕಲಾತ್ಮಕ ಬಾವಿ

ಬಾವಿಗಳ ಪರಿಕಲ್ಪನೆಯು ನಗರ ಪ್ರದೇಶಗಳಲ್ಲಿ ಬಹುತೇಕ ಅಂತ್ಯವಾಗಿದ್ದು, ಅವುಗಳ ಜೀವಂತಿಕೆಯು ಕಂಡು ಬರುವುದು ಅಲ್ಲೊಂದು ಇಲ್ಲೊಂದು ಅಷ್ಟೇ. ಆದರೆ ನಗರ ಪ್ರದೇಶಕ್ಕೆ ಹೋಲಿಸಿದರೆ ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಮನೆಗಳ ಮುಂದೆ ಬಾವಿಯೊಂದು ಕಾಣುವುದು ಸಹಜ. ಹಾಗೆ ಜೀವಾಮೃತ ಉಣಿಸುವ ಬಾವಿಗಳಿಗೆ ಜೀವಕಳೆ ತುಂಬುವ ಪ್ರವೃತ್ತಿಯೂ ನಡೆದೇ ಇದೆ. ಅದರ ಒಂದು ರೂಪ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕೊಕ್ಕೋಡು ಗ್ರಾಮದ ಶಂಕರನಾರಾಯಣ ಉಡುಪ ಅವರ ಮನೆಯ ಮುಂದಿನ ಕಲಾತ್ಮಕ ಬಾವಿಯದ್ದು. ನೋಡಲು ಸುಂದರ ಬಕೆಟ್ ಆಕೃತಿಯಲ್ಲಿ ಕಾಣುವ ಈ ಬಾವಿ ಶಂಕರನಾರಾಯಣ ಉಡುಪ ಅವರ ಮನೆಗೆ ಬಂದವರೆಲ್ಲರನ್ನೂ ಆಕರ್ಷಿಸುತ್ತದೆ.

—ಪೂರ್ಣಿಮಾ ಭಟ್, ಮೈಸೂರು

### ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly